ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಇಂಗಳಗಿ ಗ್ರಾಮದ ಕುಡಿಯುವ ನೀರಿನ ಯೋಜನೆಗೆ ಎಂದು ಆಡಳಿತಾತ್ಮಕ ಮಂಜೂರಾತಿ ಕೊಡಲಾಯಿತು ಮತ್ತು ಇದಕ್ಕೆ ಎಷ್ಟು ಹಣ ಕೊಡಲಾಯಿತು?

ಆ) ಈ ಕಾಮಗಾರಿಗಾಗಿ ಪುನರ್ ವಿಮರ್ಶಿತ ಅಂದಾಜಿಗೆ ಎಂದು ಅನುಮತಿ ಕೊಡಲಾಯಿತು?

ಇ) ಈ ಯೋಜನೆ ಮುಗಿಸಲು ಇನ್ನೂ ಎಷ್ಟು ಸಮಯ ಬೇಕಾಗುವುದು, ಮತ್ತು ಹಣಕಾಸಿನ ತೊಂದರೆಯಿಂದ ಈ ಕೆಲಸ ನಿಂತ ಸಂಗತಿ ನಿಜವೆ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು)

ಅ) ಈ ಯೋಜನೆಗೆ ದಿನಾಂಕ: 29-12-79 ರಲ್ಲಿ ರೂ.96,800-00 ಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿತ್ತು, ಮತ್ತು ಈ ಕಾಮಗಾರಿಗೆ ಇದುವರೆವಿಗೆ ರೂ.1,25,000-00 ಗಳನ್ನು ವೆಚ್ಚ ಮಾಡಲಾಗಿದೆ.

ಆ) ಪುನರ್ ವಿಮರ್ಶಿತ ಅಂದಾಜು ಪಟ್ಟಿಗೆ ಅನುಮತಿ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯನ್ನು ಮಾರ್ಚ್ 1992ರ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಮತ್ತು ಈ ಕೆಲಸವು ಹಣಕಾಸಿನ ತೊಂದರೆಯಿಂದ ನಿಂತಿರುವುದಿಲ್ಲ.

ಮೂಡಬಿದ್ರೆಯ ಕ್ರೀಡಾಂಗಣದ ಬಗ್ಗೆ

2136 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆಯ ಕ್ರೀಡಾಂಗಣಕ್ಕೆ ಸರ್ಕಾರವು ಎಷ್ಟು ಎಕರೆ ಜಮೀನನ್ನು ನೀಡಿದೆ?

ಆ) ಇಲ್ಲಿ ರಚಿಸಬೇಕೆಂದಿರುವ ಕ್ರೀಡಾಂಗಣವು ದೊಡ್ಡದಾಗಬೇಕಾಗಿರುವುದರಿಂದ ಇದಕ್ಕೆ ಹೆಚ್ಚಿನ ಜಮೀನನ್ನು ಸರ್ಕಾರವು ಒದಗಿಸುವುದೇ?

ಇ) ಮೂಡಬಿದ್ರೆಯಲ್ಲಿರುವ ಏಕಲವ್ಯ ಕ್ರೀಡಾ ತರಬೇತಿ ಸಂಸ್ಥೆಯ ಹಾಗೂ ಊರಿನ ಇತರ ಕಾಲೇಜು ಪ್ರೌಢಶಾಲೆಗಳಿಗೆ ಅವಶ್ಯವಿರುವ ಈ ಕ್ರೀಡಾಂಗಣಕ್ಕೆ ಯಾವ ರೀತಿಯಲ್ಲಿ ಧನಸಹಾಯ ನೀಡಲಾಗುವುದು?

ಈ) ಕೇಂದ್ರ ಸರ್ಕಾರವು ಈ ಕ್ರೀಡಾಂಗಣದ ಯೋಜನೆಗೆ ಧನಸಹಾಯ ನೀಡುವುದೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) 3,86 ಎಕರೆ ಜಮೀನನ್ನು ನೀಡಿದೆ.

ಆ) ಕೇಂದ್ರ ಸರ್ಕಾರದ ಮಾರ್ಗದರ್ಶಿ ಪ್ರಕಾರ ಕ್ರೀಡಾಂಗಣ ಕಟ್ಟಲು 8 ಎಕರೆ ಭಾಗ ಬೇಕಾಗುವುದು. ಇದಕ್ಕೆ ಹೆಚ್ಚುವರಿಯಾಗಿ 3.14 ಎಕರೆ ಜಮೀನನ್ನು ನೀಡುವಂತೆ ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಇವರಿಗೆ ಕ್ಷೋರಲಾಗಿದೆ.

ಇ) ಸದ್ಯ, ಹೋಬಳಿ ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಧನಸಹಾಯವನ್ನು ವಿಸ್ತರಿಸುವ ಯೋಜನೆ ಇರುವುದಿಲ್ಲ. ಆದಾಗ್ಯೂ ತಾಲ್ಲೂಕು ಮಟ್ಟದ ಕ್ರೀಡಾಂಗಣ ಕಾರ್ಯವನ್ನು ಮುಕ್ತಾಯಗೊಳಿಸಿದ ನಂತರ, ಹೋಬಳಿ ಮಟ್ಟದಲ್ಲಿ ಕ್ರೀಡಾಂಗಣಗಳ ನಿರ್ಮಾಣ ಕಾರ್ಯದ ಧನಸಾಯವನ್ನು ವಿಸ್ತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹೌದು.

ನೆಲಮಂಗಲ ತಾಲ್ಲೂಕು ಪ್ರವಾಸಿಗರ ಕೇಂದ್ರಗಳ ಬಗ್ಗೆ

2080 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ ಶಿವಗಂಗೆ ಕ್ಷೇತ್ರವನ್ನು ಹಾಗೂ ದೊಡ್ಡಬಳ್ಳಾಪುರ ಮದುರೆ ಹೋಬಳಿ ಕನಸವಾಡಿ ಗ್ರಾಮದಲ್ಲಿ ನೆಲೆಸಿರುವ ಶ್ರೀ ಶನಿಮಹಾತ್ಮ ದೇವಸ್ಥಾನದ ಕ್ಷೇತ್ರವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಬೇಕೆಂದು ಮನವಿ ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಹೌದು

ಆ) *1) ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸಿ ಕ್ಷೇತ್ರಗಳಲ್ಲಿ ಶಿವಗಂಗೆಯು ಸೇರಿದೆ. ಆರ್ಥಿಕ ಸಂಪನ್ಮೂಲಗಳು ಲಭ್ಯವಾದ ಹಾಗೆ ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದು.*

2) ಕನಸವಾಡಿ ಗ್ರಾಮದ ಶನಿಮಹಾತ್ಮ ದೇವಸ್ಥಾನವನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಲಾಗುವುದು.

ರಾಜ್ಯದಲ್ಲಿರುವ ಜಲಾಶಯಗಳ ರಕ್ಷಣಾ ಕ್ರಮಗಳು

2047 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದಲ್ಲಿರುವ ಜಲಾಶಯಗಳನ್ನು ವಿದ್ವಂಸಕಾರರು ಬಾಂಬ್ ಸ್ಫೋಟನೆಯಿಂದ ನಾಶಪಡಿಸುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅವುಗಳ ಭದ್ರತೆಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಬಂದಿದೆ.

ಆ) ರಾಜ್ಯದಲ್ಲಿರುವ ಭಾರಿ ನೀರಾವರಿ ಜಲಾಶಯಗಳ ಅಣೆಕಟ್ಟುಗಳ ಎಲ್ಲಾ ಪ್ರವೇಶ ದ್ವಾರಗಳನ್ನು ಮುಚ್ಚಲಾಗಿದ್ದು ಕೇವಲ ಒಂದು ದ್ವಾರ ತೆಗೆಯಲಾಗಿದ್ದು, ಜಲಾಶಯದ ಸ್ಥಳದಲ್ಲಿ ಹಗಲುರಾತ್ರಿ ಪಹರೆ ಹಾಕಲಾಗಿದೆ.

ಕೆ.ಜಿ.ಎಫ್-ರಾಮಕುಪ್ಪಂ ಮಧ್ಯ ಇರುವ ರಸ್ತೆಗೆ ಡಾಂಬರೀಕರಣ ಮಾಡುವುದು

2070 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕೆ.ಜಿ.ಎಫ್ ರಾಮಕುಪ್ಪಂ ಮಧ್ಯೆ ಇರುವ ರಸ್ತೆಯ ಉದ್ದವೆಷ್ಟು?